ಪರ್ಕಾಮಾನಗಳು ಬರುತ್ತಿರುತ್ತವೆ. ರಾಜ್ಯಾದ್ಯಂತ ಸರ್ಕಾರ ಆ ಕಡೆ ಗಮನಹರಿಸಿ ಆಸ್ಪತ್ರೆಯನ್ನು ಮೇಲಪ್ಪಿಸಿಕ್ಕೆ ತಕ್ಕಮಂತಹ ವಿಚಾರವನ್ನು ಮಾಡಬೇಕು ಅಥವಾ ಸರ್ಕಾರವೇ ಅದನ್ನು ಪಕ್ಕಕ್ಕೆ ತೆಗೆದುಕೊಂಡು ಅದನ್ನು ರಿಪೇರಿ ಮಾಡುವಂತಹ ಕೆಲಸ ಮಾಡಬೇಕು. ಏಕೆಂದರೆ ಅದು ಅತ್ಯಾವಶ್ಯಕವಾದಂತಹ ಆಸ್ಪತ್ರೆ. ಅಂತಹ ಆಸ್ಪತ್ರೆ ಬಾವುಗೆ ಜಿಲ್ಲೆಯಲ್ಲಿ ಇಲ್ಲದೇ ಇರುವಂತಹ ಒಂದು ಮಾದರಿ ಕಟ್ಟಡ ಕಟ್ಟಿದ್ದಾರೆ. ಆ ಆಸ್ಪತ್ರೆಯನ್ನು ಉಳಿಸಿಕೊಳ್ಳುವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ತಮ್ಮ ಸಲಹೆಯನ್ನು ನಾನು ಒಪ್ಪುತ್ತೇನೆ. ಈಗಲೇ ಸರ್ಕಾರದ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇವೆ.

ಅಧ್ಯಕ್ಷರು : ನೀವು ರಾಜ್ಯಕ್ಕೆ ಹೇಳಿದಿರಿ, ಆದರೆ ನೀವು ಕೇವಲ ಎಲ್ಲಾ ಪ್ರಶ್ನೆಗಳನ್ನು ಸಕಲೇಶಪುರಕ್ಕೆ ಸಂಬಂಧಪಟ್ಟ ಹಾಗೆ ಕೇಳುತ್ತೀರಿ. ನೀವು ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಕೇಳುತ್ತಿಲ್ಲ. ನಾವು ನಿಮ್ಮ ಮೇಲೆ ಕಂಪ್ಲೇಂಟ್ ಮಾಡಬೇಕೆಂದು ಇದ್ದೇವೆ.

ಶ್ರೀ ಬಿ.ಬಿ. ಶಿವಪ್ಪ : ನನ್ನ ಮೊದಲನೆ ಆದ್ಯತೆ ನಾನು ಆರಿಸಿಬಂದಿರತಕ್ಕಂಥ ಕ್ಷೇತ್ರಕ್ಕೆ. ಎರಡನೇ ಆದ್ಯತೆ ರಾಜ್ಯಕ್ಕೆ. ಏಕೆಂದರೆ ಕ್ಷೇತ್ರದ ಜನ ನಮ್ಮ ಕ್ಷೇತ್ರದ ಬಗ್ಗೆ ನಮ್ಮ ಶಾಸಕರು ಏನು ಮಾಡಿದ್ದಾರೆ ಎಂದು ಕಾಯುತ್ತಿರುತ್ತಾರೆ.

ಮಂಗಳೂರು ಕ್ರೀಡಾಂಗಣ ಕುರಿತು

155 - ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕ್ರೀಡೆಗಳನ್ನು ಪ್ರೋತ್ಸಾಹಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ? ಯೋಜನೆಗಳೇನು?

ಆ) ಜಿಲ್ಲಾ ಕೇಂದ್ರಗಳಲ್ಲಿರುವ [illegible] ಅವ್ಯವಸ್ಥೆ ಹಾಗೂ ಮುರಕ್ಕೆ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಮಂಗಳೂರಿನಲ್ಲಿರುವ ಮಂಗಳಾ [illegible] ಕೈಗೊಂಡಿದೆಯೇ? ಹಾಗಿದ್ದಲ್ಲಿ ಸರ್ಕಾರವು [illegible]

ಈ) ಜಿಲ್ಲಾಮಟ್ಟದ ಕ್ರೀಡಾಂಗಣ ಮಂಗಳೂರಿನಲ್ಲಿ [illegible] ಕ್ರೀಡಾಂಗಣ ಕೈಗೊಳ್ಳಲಾಗಿದೆ ಎಷ್ಟು ಅನುದಾನ ಬಿಡುಗಡೆ?

ಉ) ಮಂಗಳೂರಿನಲ್ಲಿ ಈಜುಕೊಳವನ್ನು [illegible] ನಿರ್ಮಿಸಲು ಸರ್ಕಾರ ಯೋಚಿಸಿದೆಯೆ?

ಶ್ರೀ ವಿಜಯಕುಮಾರ್ ಸರ್ ನಾಯಕ (ಯುವಜನ ಸೇವಾ ಕ್ರೀಡಾ ಸಚಿವರು) :

ಅ) ರಾಜ್ಯದಲ್ಲಿ ಕ್ರೀಡೆಗಳನ್ನು ಪ್ರೋತ್ಸಾಹಿಸಲು ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇವುಗಳಲ್ಲಿ ಗ್ರಾಮೀಣ ಕ್ರೀಡಾಕೂಟ, ಮಹಿಳಾ ಕ್ರೀಡಾ ಕೂಟ, ವಸತಿ ಕ್ರೀಡಾಕೂಟ ಹಾಗೂ ಸರ್ಕಾರಿ ನೌಕರರ ಕ್ರೀಡಾಕೂಟಗಳು ಮುಖ್ಯವಾದವು. ಅಲ್ಲದೆ ಅಂತರ ರಾಷ್ಟ್ರೀಯ, ರಾಷ್ಟ್ರೀಯ, ಅಂತರ ವಲಯ ದಕ್ಷಿಣ ವಲಯ ಹಾಗೂ ರಾಜ್ಯ ಮಟ್ಟದ ಕ್ರೀಡಾ ಕೂಟಗಳಲ್ಲಿ ರಾಜ್ಯ ತಂಡಗಳು ಹಾಗೂ ರಾಜ್ಯದ ಕ್ರೀಡಾಪಟುಗಳ ಪೂರ್ವಭಾವಿಗಳ ಸಮಯದ ತರಬೇತಿ ಶಿಬಿರಗಳಿಗೆ ರಾಜ್ಯ ಕ್ರೀಡಾ ಸಂಸ್ಥೆಗಳ ಮೂಲಕ ಧನಸಹಾಯ ಮಂಜೂರು ಮಾಡಲಾಗುತ್ತಿದೆ.

ಆ) ಬಂದಿದೆ.

ಇ) ಮಂಗಳ ಕ್ರೀಡಾಂಗಣವು ಇಲ್ಲಿವರೆಗೆ ಮಂಗಳೂರು ಮಹಾನಗರ ಪಾಲಿಕೆಯ ಸ್ವಾಧೀನದಲ್ಲಿದ್ದು ದಿನಾಂಕ : 16.6.95ರಂದು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ವಹಿಸಿಕೊಡಲಾಗಿದೆ. 1995-96ನೇ ಸಾಲಿನಲ್ಲಿ ಈ ಕ್ರೀಡಾಂಗಣಕ್ಕೆ 75,000-00 ರೂ.ಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ಈ) ಮಂಗಳೂರಿನಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಸರ್ಕಾರದಿಂದ ಆರ್ಥಿಕಾತ್ಮಕ ಮಂಜೂರಾತಿ ನೀಡಲಾಗಿದೆ. ಈ ನಿರ್ಮಾಣವನ್ನು ಜಿಲ್ಲಾ ಪಂಚಾಯತ್ ವತಿಯಿಂದ ರೂ. 12.00 ಲಕ್ಷಗಳು ಮತ್ತು ಕೇಂದ್ರ ಸರ್ಕಾರದ ಧನಸಹಾಯ ಹಾಗೂ ಸಾರ್ವಜನಿಕ ವಂತಿಕೆ ಹಣವು ಪೂರ್ಣಗೊಳಿಸಲಾಗುವುದು.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಸರ್ಕಾರ ಕೊಟ್ಟಿರುವ ಉತ್ತರ 'ಅ' ದಲ್ಲಿ ಅನೇಕ ಕ್ರೀಡಾ ಪಟುಗಳ ಬಗ್ಗೆ ಮಾತ್ರ ಉಲ್ಲೇಖವಾಗಿದೆ. ಆದರೆ ಕ್ರೀಡಾ ಪಟುಗಳಿಗೆ ಯಾವ ತರಹದ ಪ್ರೋತ್ಸಾಹದ ಧನ ಇನ್ನಿತರ ಸೌಲಭ್ಯಗಳನ್ನು ಕೊಡುತ್ತೀರಾ ಎನ್ನುವುದರ ಬಗ್ಗೆ ಯಾವುದೇ ಸ್ಪಷ್ಟೀಕರಣ ನೀಡಿಲ್ಲ. ಇನ್ನು ಎರಡನೆಯದಾಗಿ ಅನಂತ ಶೆಟ್ಟಿ, ವಾಮೋದರ ಗೌಡ, ಸುನೀಲ್ ಶೆಟ್ಟಿ, ಅನಿಲ್ ಶೆಟ್ಟಿ ಇಂತಹ ಅಂತರರಾಷ್ಟ್ರೀಯ ಕ್ರೀಡಾ ಪಟುಗಳನ್ನು ತಯಾರು ಮಾಡಿದ ಮಂಗಳೂರು ಮಂಡಲ ಕ್ರೀಡಾಂಗಣದಲ್ಲಿ ಇವತ್ತು ಒಂದು ಟ್ರಾಕ್ ಕೂಡ ಇಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ? ಅದರ ದುರಸ್ತಿ ಮತ್ತು ಇನ್ನಿತರ ಕ್ರೀಡಾ ಸೌಲಭ್ಯಕ್ಕೋಸ್ಕರ ಕನಿಷ್ಠ 17 ಲಕ್ಷ ರೂಪಾಯಿಬೇಕು ಎಂದು ಎಸ್ಟಿಮೇಟ್ ಕಳುಹಿಸಿದ್ದು ತಮ್ಮ ಗಮನಕ್ಕೆ ಬಂದಿದೆಯೇ? ಈ ಬಗ್ಗೆ ಹಣವನ್ನು ತಾವು ಯಾವಾಗ ಬಿಡುಗಡೆ ಮಾಡುತ್ತೀರಿ? ಏನು ಕ್ರಮ ಕೈಗೊಳ್ಳುತ್ತಿದ್ದೀರಿ?

ಶ್ರೀ ವಿಜಯ್ ಕುಮಾರ್ ಸರನಾಯಕ : ಮಾನ್ಯ ಅಧ್ಯಕ್ಷರೇ, ಕ್ರೀಡಾ ಪಟುಗಳಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ನಮ್ಮ ಇಲಾಖೆಯಿಂದ ನಾವು ಹಮ್ಮಿಕೊಂಡಿದ್ದೇವೆ. ಅದರಲ್ಲಿ ಮುಖ್ಯವಾಗಿ ನಾವು ಒಳಾಂಗಣ ಕ್ರೀಡಾ ಪಟುಗಳಿಗೆ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿದವರಿಗೆ ಪ್ರವೇಶ ಶುಲ್ಕವನ್ನು ಪ್ರಶಸ್ತಿಯನ್ನು ಕೊಡುತ್ತಿದ್ದೇವೆ ಹಾಗೂ ಮಾನ್ಯ ಸದಸ್ಯರಿಗೆ ಸಾಕಷ್ಟು ಪತ್ರಗಳನ್ನು

ಕರ್ನಾಟಕದ ಕ್ರೀಡಾ ಪಟುಗಳು ಏಷ್ಯಾ ಖಂಡವನ್ನು ಪ್ರತಿನಿಧಿಸಿದ್ದಾರೆ ಅವರಿಗೆ ಗೋಲ್ಡ್ ಮೆಡಲ್, ಸಿಲ್ವರ್ ಮೆಡಲ್ ಬ್ರಾಂಜ್ ಮೆಡಲ್ ಹಾಗೂ ಗನ್ನಲ್ಲಿ ನಾವು ಕ್ಯಾಷ್ ಇನಾಮಂಟೆರ್ ಕೊಡುತ್ತೇವೆಂದು ಈಗಾಗಲೇ ಘೋಷಣೆ ಮಾಡಿದ್ದೇವೆ, ಅದನ್ನು ಕೂಡ ಕೊಡುತ್ತಿದ್ದೇವೆ. ಈ ರೀತಿಯಾಗಿ ನಾಲ್ಕು ಇನಾಮಂಟ್ ಕೊಡುತ್ತಿದ್ದೇವೆ. ನಂತರ ಮಂಗಳೂರು ಕ್ರೀಡಾಂಗಣದ ಬಗ್ಗೆ ಏನು ಹೇಳಿದರು, ಅದು ಇಲ್ಲಿಯವರೆಗೂ ಮಂಗಳೂರು ಕಾರ್ಪೋರೇಷನ ಪರವಾಗಿತ್ತು. ಮೊನ್ನೆ ನಾನೇ ಶಂಕುಸ್ಥಾಪನೆ ನಾವು ಪಕ್ಕಾಂತ ಮಾಡಿಕೊಂಡಿದ್ದೇವೆ. ಈಗಾಗಲೇ ಇದಕ್ಕೆ ೬೫ ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಮಾಡಿದ್ದೇವೆ. ಇನ್ನು ಹಣ್ಣಿಗೆ ಹಣ ಅದನ್ನು ರಿಪೇರಿ ಮಾಡುವುದಕ್ಕೆ ಬೇಕಾಗಿರುವ ಮುಂದಿನ ವರ್ಷದಲ್ಲಿ ಪೂರ್ಣಗೊಳಿಸಿ ಮಾಡುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ : ಸಿಂಥೆಟಿಕ್ ಟ್ರಾಕ್ ಅದರೂ ಕೊಟ್ಟರೆ ಅಲ್ಲಿ ಇನ್ನೂ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳನ್ನು ತಯಾರು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇದು ನನ್ನ ಮೊದಲನೆಯ ಉಪಪ್ರಶ್ನೆ. ಎರಡನೆಯದು ಏನು ಹೇಳಿದರೆ, ಮಂಗಳೂರು ಕ್ರೀಡಾಂಗಣಕ್ಕೆ ರಾಜ್ಯಸರ್ಕಾರದ ಅನುದಾನವನ್ನು ಎಷ್ಟು ಕೊಡುತ್ತೀರಿ? ಏನು ಹೇಳಿ ಇಲ್ಲಿ ಉಲ್ಲೇಖ ಮಾಡಿಲ್ಲ, ಅದರ ಬಗ್ಗೆಯೂ ತಾವು ಸ್ಪಷ್ಟೀಕರಣ ಕೊಡಬೇಕು. ಮತ್ತೆ ಮೂರನೆಯದಾಗಿ 'ಏಕಲವ್ಯ ಪ್ರಶಸ್ತಿ' ಯೋಗಾಯಿಯ್ಯ ಪ್ರಶಸ್ತಿ' ಇನ್ನಿತರ ಅನೇಕ ಪ್ರಶಸ್ತಿಗಳನ್ನು ತಾವು ಪ್ರಕಟಿಸುತ್ತೀರಿ, ಅದನ್ನು ಮಟ್ಟಾಗಿ ಪ್ರಕಟಿಸುವಂಥ ಪದ್ಧತಿ ಪ್ರಾರಂಭವಾಗಿದೆ. ಏಕೆ ಅದನ್ನು ಪಬ್ಲಿಸ್ಟ್ ಮಾಡುತ್ತಲೇ ಇಲ್ಲ? ಅನೇಕ ಕ್ರೀಡಾಪಟುಗಳು ತಮ್ಮ ಆಜೀವನವನ್ನು ಹಾಕುವುದಕ್ಕೆ ಏಕೆ ಅವಕಾಶವನ್ನು ಕೊಡುತ್ತಿಲ್ಲ. ಕುಮಾರಿ ಬಾಕಲೆಗೆ ರೋಜೊರಿಯೊ ಅಂತಹ ಅಂತರರಾಷ್ಟ್ರೀಯ ಮಟ್ಟದಲ್ಲಿ ಪದ್ಮಪ್ರಶಸ್ತಿಯಂಥ ಕ್ರೀಡಾಪಟುಗಳಿಗೂ ಕೂಡ ಏಕಲವ್ಯ ಪ್ರಶಸ್ತಿ ಸಿಗದೇ ಇರುವಂಥದ್ದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ವಿಜಯಕುಮಾರ್ ಸಂಕಾಯಕ್ : ಸನ್ಮಾನ್ಯ ಅಧ್ಯಕ್ಷರೆ, ಈ ಸಿಂಥೆಟಿಕ್ ಟ್ರಾಕ್ ಬಗ್ಗೆ ಏನು ವಿಚಾರ ಹೇಳಿದರು, ಇಲ್ಲಿಯವರೆಗೆ ಮಂಗಳೂರು ಬಿಟ್ಟರೆ ಬೇರೆ ಯಾವ ಜಿಲ್ಲಾ ಕೇಂದ್ರದಲ್ಲಿ ಸಿಂಥೆಟಿಕ್ ಟ್ರಾಕ್ ಹಾಕಿಲ್ಲ. ಅದರೆ ನಾವು ಹಂತಹಂತವಾಗಿ ಪ್ರತಿ ಜಿಲ್ಲೆಗೂ ಒಂದು ಸಿಂಥೆಟಿಕ್ ಟ್ರಾಕ್ ಮಾಡುವಂಥ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ. ಏಕೆಂದರೆ, ಒಂದು ಸಿಂಥೆಟಿಕ್ ಟ್ರಾಕ್ ಹಾಕಬೇಕೆಂದರೆ ಕನಿಷ್ಠ 25 ಲಕ್ಷ ರೂಪಾಯಿಯ ಬಿಡ್ಡಿ ಬೇಳುತ್ತದೆ. ಆದ್ದರಿಂದ ಇದನ್ನು ಹಂತಹಂತವಾಗಿ ಮಾಡಿಕೊಡುತ್ತೇವೆ. ಆಮೇಲೆ ಈ ಮಂಗಳೂರು ಒಳಾಂಗಣ ಕ್ರೀಡಾಂಗಣದ ಬಗ್ಗೆ ಏನು ಕೇಳಿದರು, ಈಗಾಗಲೇ ಅದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದ್ದೇವೆ ಜೊತೆಗೆ ಈ ವರ್ಷದಲ್ಲಿ ಹತ್ತು ಲಕ್ಷ ರೂಪಾಯಿಗಳ ಮಂಜೂರಾತಿಯನ್ನು ಜಿಲ್ಲಾಧಿಕಾರಿಯವರಿಗೆ ಬಿಡುಗಡೆಗೊಳಿಸಿದ್ದೇವೆ. ಆಮೇಲೆ ಇದಕ್ಕೆ ಒಂದು ಸ್ಟೇಡಿಯಂ ಇದ್ದು ಇದಕ್ಕೆ ಕೇಂದ್ರ ಸರ್ಕಾರದಿಂದಲೂ ಹಣ ಬರುತ್ತದೆ. ಆಮೇಲೆ ಲೂಕಲ್ ಕಾಂಟ್ರಿಬ್ಯೂಷನ್ ಬರಬೇಕಾಗುತ್ತದೆ. ಈ ರೀತಿಯಾಗಿ 55 ಲಕ್ಷ ರೂಪಾಯಿಗಳ ಅಂದಾಜುಪಟ್ಟಿಯಲ್ಲಿ ಇದಕ್ಕೆ ಆಡಳಿತಾತ್ಮಕ [illegible] ಯನ್ನು ಕೊಟ್ಟಿದ್ದೇವೆ. ಅದನ್ನು ಆದಷ್ಟು ಬೇಗ ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಈ [illegible] ಏಕಲವ್ಯ ಪ್ರಶಸ್ತಿ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ, ಈ ಪ್ರಶಸ್ತಿಯನ್ನು

ನಾವೆಲ್ಲ ಕೊಮುಶ್ಚಿಸ್ಟರು ಇದರಲ್ಲಿ ನಾವು ಮುಚ್ಚುಮರೆಯಾಗಿಯಾಗಲಿ ಏನೂ ಇಲ್ಲ, ಏಕೆಂದರೆ ಏಕಲವ್ಯ ಪ್ರಶಸ್ತಿಯನ್ನು ಕೊಡಬೇಕಾದರೆ ಸರ್ಕಾರ ಅದಕ್ಕೆ ಏನಾದರೂ ಗೈಡಲೈನ್ಸ್ ಮಾಡಿಕೊಟ್ಟಿದೆ. ಆ ಪ್ರಕಾರವಾಗಿಯೇ ನಾವು ಕೊಡುತ್ತಿದ್ದೇವೆ. ಎಷ್ಟೊಬ್ಬರು ಯಾರಾದರೂ ಬಿಟ್ಟುಹೋಗಿದ್ದರೆ, ನಾವು ಉದ್ದೇಶಪೂರ್ವಕವಾಗಿ ಬಿಟ್ಟಿರುವಂತಹದ್ದು ಯಾವುದೂ ಇಲ್ಲ, ಸಂಬಂಧಪಟ್ಟ ಸಂಸ್ಥೆಯವರು ನಮ್ಮ ಗಮನಕ್ಕೆ ತಂದರೆ ನಾವು ಅವರೂ ಕೂಡ ಮುಂದಿನ ವರ್ಷಗಳಲ್ಲಿ ಪ್ರಶಸ್ತಿಯನ್ನು ಕೊಡುವಂಥ ಕಾರ್ಯಕ್ರಮವನ್ನು ಮಾಡಿಕೊಳ್ಳುತ್ತೇವೆ.

ಶ್ರೀ ಎಸ್. ಮೊಗಣ್ಣ ಭಂಡಾರಿ : ಕ್ರೀಡಾ ಪ್ರಾಧಿಕಾರವನ್ನು ಅವರು ಮಾಡಿ ಎಲ್ಲಾ ತರಬೇತಿ ಕ್ರೀಡಾ ಪ್ರೋತ್ಸಾಹವನ್ನು ಕೊಡುವಂಥ ಯೋಜನೆಗಳು ಇವೆ ಎಂದು ತಾವು ಅರಂಭದಲ್ಲಿ ಅಂದರೆ ಎಂದು ವರ್ಷದ ಎಂದು ಹೇಳಿದ್ದಿರಿ. ಅದರ ಇದಕ್ಕೆಲ್ಲಾ ಅದನ್ನು ಅನುಷ್ಠಾನಕ್ಕೆ ತಂದಿಲ್ಲ. ತಾವು ಅದರ ಮೂಲಕ ಏನು ಕಾರ್ಯಕ್ರಮವನ್ನು ಮಾಡಿಕೊಳ್ಳುವವರಿದ್ದೀರಿ?

ಶ್ರೀ ಅಜಯಕುಮಾರ್ ಸರನಾಯಕ್ : ಸನ್ಮಾನ್ಯ ಅಧ್ಯಕ್ಷರೆ, ಈ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಲಿಕ್ಕೆ ಈಗಾಗಲೇ ನಾವು ಮೊದಲು ಏನು ಸ್ಪೋರ್ಟ್ಸ್ ಕೌನ್ಸಿಲ್ ಏನು ಇತ್ತು ಅದನ್ನು ರದ್ದುಮಾಡಿ ಕ್ರೀಡಾ ಪ್ರಾಧಿಕಾರವನ್ನು ಸ್ಥಾಪನ ಮಾಡಿದ್ದೇವೆ. ಕ್ರೀಡಾ ಪ್ರಾಧಿಕಾರ ಸ್ಥಾಪನೆಯಾದ ನಂತರ ನಾವು ಗ್ರಾಮೀಣ ಮಟ್ಟಕ್ಕೆ ಹೋಗಿ, ಗ್ರಾಮೀಣ ಮಟ್ಟದಲ್ಲಿರತಕ್ಕಂಥ ಪ್ರತಿಭೆಯನ್ನು ಮೇಲಕ್ಕೆತ್ತುವಂಥ ಕಾರ್ಯಕ್ರಮಗಳನ್ನು ಮಾಡಿಕೊಂಡಿದ್ದೇವೆ. ಅದನ್ನು ಮುಂದಿನವರ್ಷದಿಂದ ಜಾರಿಗೆ ತರುತ್ತೇವೆ.

ಶ್ರೀ ಕೆ. ಜಯಾನಂದ ರೈ : ಸನ್ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಕಲ್ಕತ್ತಡಿಲ್ಲಿ ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಪ್ರೌಢಶಾಲಾ ವಿದ್ಯಾರ್ಥಿನಿ ವಿದ್ಯಾರ್ಥಿಯರುಗಳಿಗೆ ಭಾಗವಹಿಸುವ ವ್ಯವಸ್ಥೆ ಮಾಡಿತ್ತು. ಅದರ ಈ ಕ್ರೀಡಾಕೂಟದ ಮ್ಯಾನೇಜರುಗಳಾದ ಮಸ್ತಾಕ್ ಅಹಮ್ಮದ್ ಮತ್ತು ಶ್ರೀ ವೀರಪ್ಪ ರಾಜರ್ ಅವರುಗಳ ತೊಂದರೆಯಿಂದಾಗಿ ಮಾನಸಿಕ ಕ್ಲೇಶಗಳಿಗೆ ಒಳಗಾಗಿ ಪ್ರಶಸ್ತಿಯನ್ನು ಕಳುಹಿಸಲು ಅಂತರವಾದಲ್ಲಿ ನಾವು ಕಳಿಸಿಕೊಂಡಿದ್ದೇವೆ. ಉದಾಹರಣೆಗೆ ನನ್ನ ಕ್ಷೇತ್ರದ ಅನುಷಾಲಯ ಪ್ರೌಢಶಾಲೆಯ ಕುಮಾರಿ ಸದಾ ಸಮೋದರಿಯವರು ಉದ್ದ ಜಿಗಿತ ಮತ್ತು ಎತ್ತರ ಜಿಗಿತದಲ್ಲಿ ಈ ಕಲವು ತೊಂದರೆಯಿಂದಾಗಿ ಕಲವು ಅಂತರವಾದಲ್ಲಿ ಅವರು ಸೂಚನೆಯನ್ನು ಉಲ್ಲಂಘಿಸುತ್ತಾರೆ. ನಮ್ಮ ತಂಡದ ಮ್ಯಾನೇಜರ್ ಗಳು ಮತ್ತು ರಾಜ್ಯಸರ್ಕಾರ ಅವರಿಗೆ ಬೇಕಾದಂಥ ಪ್ರೋತ್ಸಾಹವನ್ನು ಕೊಡಲಿಲ್ಲ, ಅವರಿಗೆ ಊಟ ತಿಂದಿ ವ್ಯವಸ್ಥೆ ಮಾಡಲಿಲ್ಲ, ಅದರ ಇಲ್ಲಿ ತೊಂದರೆಯಾಗಿದೆ ಎಂದು ಅವರು ತೀರ್ಮಾನಿಸಿಕೊಂಡಿದ್ದಾರೆ ಅವರ ಬಗ್ಗೆ ಅವರ ಪೋಷಕರು ಮತ್ತು ಕ್ರೀಡಾಪಟುಗಳು ಮನಸೊಯಿಸ್ಸಿ ಕೊಂಡ ನಂತರ ಕೊಟ್ಟಿದ್ದಾರೆ ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಂಭೀರವಾಗಿ ಪರಿಶೀಲನೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಸದಾನಂದಗೌಡ : ಸನ್ಮಾನ್ಯ ಅಧ್ಯಕ್ಷರೆ, ಏಕಲವ್ಯ ಪ್ರಶಸ್ತಿಯ ಬಗ್ಗೆ ಏನು ಹೇಳಿದರು ಅದಾಗಲೇ ಸಾಕಷ್ಟು ಆಗಿ ಹೋಗಿದೆ ಅಂತಿತ್ತು. ನಾನು ಆ ವಿಷಯವಾಗಿ ಮಂತ್ರಿಗಳಿಗೆ ಈಗಾಗಲೇ ಕಳುಹಿಸಿಕೊಟ್ಟಿದ್ದೇನೆ. ಮಂತ್ರಿಗಳು ತಕ್ಷಣ ಅದರ ಬಗ್ಗೆ ಕಾರ್ಯಪ್ರವೃತ್ತರಾಗದೇ ಇದ್ದಲ್ಲಿ, ನಮ್ಮ ರಾಜ್ಯದಿಂದ ಮೂರಿಂದ 8 ಜನಗಳು ಈ ರೀತಿಯ ತೀರ್ಮಾನಗಳಾಗಿ ಅವರನ್ನು ಪ್ರದರ್ಶನಕ್ಕೆ ಕಳುಹಿಸಿಕೊಡುವುದಾದರೆ

ವಿಫಲರಾಗಿದ್ದಾರೆ ಮತ್ತು ಮಾನ್ಯ ಸರ್ಕಾರದ ಗಮನಕ್ಕೆ ಬಂದಿದೆ ಎಂದು ತಿಳಿದುಕೊಂಡಿದ್ದೇನೆ. ಆದರೂ ಕೂಡ ಮಂತ್ರಿಗಳ ಗಮನಕ್ಕೆ ಪತ್ರವನ್ನು ಬರೆದಿದ್ದಾರೆ ಮಂತ್ರಿಗಳೂ ಕೂಡ ನಮಗೆ ಪತ್ರ ಸಿಕ್ಕಿದೆ ಎಂದು ಹೇಳಿದ್ದಾರೆ ತಕ್ಷಣ ಅದಕ್ಕೆ ಗಮನಹರಿಸಿದ್ದರೆ ಹಾಗೂ ಇನ್ನು [illegible] ಮುಂದುವರಿದರೆ ತುಂಬಾ ತೊಂದರೆಯಾಗುತ್ತದೆ ಎಂದು ಹೇಳಬಯಸುತ್ತೇನೆ.

SRI NARAYANARAO GOVIND THARALE : Last year, one of the body-builders, Sunil Aplekar, participated in China. He was afflicted with AIDS. He is not getting anything from the Government kindly look into the matter.

ಶ್ರೀ ಅಶೋಕ್ ಕಾಟ್ಟೆ : ಹುಬ್ಬಳ್ಳಿ ಮಹಾನಗರ, ಜಂಗಳೂರನ್ನು ಬಿಟ್ಟರೆ ರಾಜ್ಯದ ಎರಡನೇ ಮಹಾ ದೊಡ್ಡನಗರ, ಅಲ್ಲಿರುವಂಥದ್ದು ಸದರಿ ಕ್ರೀಡಾಂಗಣ ಒಂದೆ. ಆ ಸದರಿ ಕ್ರೀಡಾಂಗಣ ಹೊನ್ನೆ...

ಅಧ್ಯಕ್ಷರು : ತಾವು ಹುಬ್ಬಳ್ಳಿಯವರನ್ನು ಕೇಳಿದರೆ ಅವರು ಮಾಹಿತಿಯನ್ನು ಎಲ್ಲೆ ಇಟ್ಟುಕೊಂಡಿರುತ್ತಾರೆ. ಇಲ್ಲಿ ಪ್ರಸ್ತಾಪವಾಗುತ್ತಿರುವಂಥದ್ದು ಮಂಗಳೂರಿನದು. ಅದರ ಬಗ್ಗೆ ಮಾಹಿತಿ ಇರುವುದಿಲ್ಲ.

ಶ್ರೀ ಬಿ. ಚಂದ್ರಣ್ಣ : ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವಂಥದ್ದು ಬಹಳ ಸರಿಯಾಗಿದೆ, ರಾಜ್ಯಕ್ಕೆ ಬೇಕಾಗಿರತಕ್ಕಂಥದ್ದು. ಆ ಉಪಪ್ರಶ್ನೆಯನ್ನು ನಾನು ಅನುಮೋದಿಸುತ್ತೇನೆ. ಏಕೆಂದರೆ ನಮ್ಮ ರಾಜ್ಯದಲ್ಲಿ ಅಂತಹ ಘಟನೆಗಳು ಬಹಳಷ್ಟು ಆಗಿವೆ...

ಅಧ್ಯಕ್ಷರು : ಅಶೋಕ್ ಕಾಟ್ಟೆಯವರೆ ನೀವು ಸಪರೇಟಾಗಿ ಪ್ರಶ್ನೆಯನ್ನು ಕೇಳಿ ಅದನ್ನು ತರಿಸಿಕೊಳ್ಳುತ್ತೇನೆ. ಏಕೆಂದರೆ ವಿಷಯ ಅವರಲ್ಲಿ ಇರುವುದಿಲ್ಲ.

ಸೋಮವಾರಪೇಟೆ ತಾಲ್ಲೂಕಿನ ಆಲೂರು ಸಿದ್ದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರ.

156 - ಶ್ರೀ ಎಂ.ಸಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರ ಪೇಟೆ ತಾಲ್ಲೂಕಿನ ಆಲೂರು-ಸಿದ್ದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಂಜೂರಾಗಿರುವ ಸಿಬ್ಬಂದಿಯ ಸಂಖ್ಯೆ ಎಷ್ಟು?

ಆ) ಇಲ್ಲಿರುವ ವೈದ್ಯಾಧಿಕಾರಿ ಹುದ್ದೆಯು ಎಷ್ಟು ದಿವಸಗಳಿಂದ ಖಾಲಿ ಇದೆ? ಗುತ್ತಿಗೆ ಆಧಾರದ ಮೇಲೆ ಅಥವಾ ಯಾವ ರೀತಿಗೆ ವೈದ್ಯರನ್ನು ನೇಮಕ ಮಾಡದೇಯಿರಲು ಕಾರಣವೇನು?

ಇ) ಈ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವಿಶ್ವಬ್ಯಾಂಕ್ ನೆರವಿನಿಂದ ಕಟ್ಟುವ ಕಟ್ಟಡದ ಯೋಜನೆ [illegible] ಇರಬಹುದೇ?